# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಲೆಕ್ಕಪತ್ರ ಸ್ಥಾಯಿ ಸಮಿತಿ ವತಿಯಿಂದ ದಿನಾಂಕ:13–9–2011ರಂದು ವಲಯ ಜಂಟಿ/ಅಪರ ಆಯುಕ್ತರೊಂದಿಗೆ ಆಡಿಟ್ ಆಕ್ಷೇಪಣೆಗಳಿಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸಲು ನಡೆದ ಸಭೆಯ ನಡವಳಿಗಳು

**ಹಾಜರಿದ್ದ ಸಮಿತಿ ಸದಸ್ಯರು**

- **ಶ್ರೀ.ಎ.ಎಲ್.ಶಿವಕುಮಾರ್** ಅಧ್ಯಕ್ಷರು
- **ಶ್ರೀಮತಿ ನೂರ್ ಜಾನ್ ಷರೀಫ್** ಸದಸ್ಯರು
- **ಶ್ರೀಮತಿ ಕ್ವೀನ್ ಎಲಿಜಬೆತ್** ಸದಸ್ಯರು
- **ಡಾ:ಶಿವಪ್ರಸಾದ್.ಎಂ.ಎಸ್.** ಸದಸ್ಯರು
- **ಶ್ರೀ.ಕೆ.ಚಂದ್ರಶೇಖರ್** ಸದಸ್ಯರು
- **ಶ್ರೀಮತಿ ಸೈಯದ್ ಹಸೀನಾ ತಾಜ್** ಸದಸ್ಯರು

**ಹಾಜರಿದ್ದ ಅಧಿಕಾರಿಗಳು:–**

**ಅಪರ ಆಯುಕ್ತರು(ಆರ್.ಆರ್.ನಗರ)**
**ಜಂಟಿ ಆಯುಕ್ತರು(ಬೊಮ್ಮನಹಳ್ಳಿ/ಯಲಹಂಕ)**
**ಉಪಆಯುಕ್ತರು(ಪಶ್ಚಿಮ ದಾಸರಹಳ್ಳಿ)**
**ಮುಖ್ಯ ಲೆಕ್ಕಾಧಿಕಾರಿ**
**ಉಪ ನಿಯಂತ್ರಕರು(ಹಣಕಾಸು)**
**ಸಹಾಯಕ ಲೆಕ್ಕಪರಿಶೋಧಕರು**
**ಎಲ್ಲಾ ವಲಯದ ಸಹಾಯಕ ನಿಂತ್ರಕರು(ಹಣಕಾಸು)**

1. ಅಧ್ಯಕ್ಷರು ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿ ಮಾತನಾಡುತ್ತಾ ಪಾಲಿಕೆಯಲ್ಲಿ 1964ರಿಂದ ಇದುವರೆವಿಗೆ ಸುಮಾರು 1266ಕೋಟಿ ಆಕ್ಷೇಪಣೆ ಮತ್ತು 204ಕೋಟಿ ರೂ ವಸೂಲಾತಿ ಮಾಡಬೇಕಿದ್ದು, ಇಷ್ಟು ವರ್ಷದ ಆಕ್ಷೇಪಣೆಗಳಿಗೆ ಒಂದೇ ಭಾರಿ ಕಂಡಿಕೆವಾರು ಉತ್ತರಗಳನ್ನು ಸಿದ್ದಪಡಿಸಿ ನೀಡುವುದು ಕಷ್ಟವಾಗುವುದರಿಂದ ಹಂತಹಂತವಾಗಿ ಸಿದ್ದಪಡಿಸಿ ಸಮಿತಿ ಮತ್ತು ಪಾಲಿಕೆ ಸಭೆ ಮುಂದೆ ಮಂಡಿಸಿ ಸರ್ಕಾರಕ್ಕೆ ಕಳುಹಿಸುವ ಕೆಲಸ ಆಗಬೇಕಾಗಿದೆ ಈ ಕಾರ್ಯಕ್ಕೆ ಎಲ್ಲಾ ಅಧಿಕಾರಿಗಳು ಕ್ರಮಕೈಗೊಳ್ಳಬೇಕು ಮೊದಲ ಹಂತದಲ್ಲಿ ಕನಿಷ್ಟ 15 ವರ್ಷಗಳ ವರದಿಗೆ ಉತ್ತರಗಳನ್ನು ತಯಾರಿಸಿ ಕಳುಹಿಸಲು ದಿನಾಂಕ:27/7/2011ರಂದು ನಡೆದ ಸಭೆಯಲ್ಲಿ ಒಂದು ತಿಂಗಳ ಕಾಲಾವಕಾಶವನ್ನು ಸಹ ನೀಡಲಾಗಿತ್ತು. ಅದರಂತೆ ಈ ಸಭೆಯನ್ನು ಕರೆಯಲಾಗಿದ್ದು ತಮ್ಮ ತಮ್ಮ ವಲಯದಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ತಿಳಿಸಲು ಸೂಚಿಸಿದರು.

2. ಪೂರ್ವ ವಲಯದ ನೋಡೆಲ್ ಅಧಿಕಾರಿಗಳು ಮಾತನಾಡಿ ಈಗಾಗಲೇ ದಿನಾಂಕ:30/7/2011 ಮತ್ತು 6/8/2011ರಂದು ವಲಯ ಮಟ್ಟದಲ್ಲಿ ಸಭೆ ನಡೆಸಿ ಎಲ್ಲಾ ಅಧಿಕಾರಿಗಳಿಗೆ ಸೂಚಿಸಲಾಗಿದೆ, ಕೆಲವು ಕಚೇರಿಗಳಲ್ಲಿ ಸಿಬ್ಬಂದಿಗಳು ಬದಲಾಗಿರುವುದರಿಂದ ಮಾಹಿತಿ ಕ್ರೋಡೀಕರಿಸಲು ವಿಳಂಬವಾಗುತ್ತಿದ್ದು, ದಿನಾಂಕ:14/9/2011ರಂದು ಮತೊಂದು ಸಭೆ

ಕರೆಯಲಾಗಿದೆ, ಸದರಿ ಸಭೆಯಲ್ಲಿ ಕಟ್ಟು ನಿಟ್ಟಾಗಿ ಮಾಹಿತಿ ಒದಗಿಸುವಂತೆ ಸೂಚಿಸಲಾಗುವುದು ಎಂದು ಅಧ್ಯಕ್ಷರ ಮಾಹಿತಿಗೆ ತಂದರು.

ಈ ಕುರಿತು ಅಧ್ಯಕ್ಷರು ಮಾತನಾಡಿ ಈಗಾಗಲೇ 2 ತಿಂಗಳು ಕಾಲಾವಕಾಶವನ್ನು ಸಹ ನೀಡಲಾಗಿದೆ, ಇನ್ನು ಪರಿಶೀಲನೆಯ ಹಂತದಲ್ಲಿದೆಯೆಂದು ತಿಳಿಸುವುದನ್ನು ಗಮನಿಸಿದರೆ ಸಾಕಷ್ಟು ವಿಳಂಬವಾಗುವುದರಿಂದ ಈ ಆಕ್ಷೇಪಣೆಗಳಿಗೆ ಉತ್ತರಗಳನ್ನು ಯಾವ ಅಧಿಕಾರಿ ಮತ್ತು ಸಿಬ್ಬಂದಿ ನೀಡಬೇಕು ಎಂಬುದನ್ನು ಫಿಕ್ಸ್ ಮಾಡಿ ಅವರ ವೇತನ ತಡೆಹಿಡಿಯುವ ಬಗ್ಗೆ ಕ್ರಮಕೈಗೊಳ್ಳಲು ಸೂಚಿಸಿದರು.

3. ಪಶ್ಚಿಮ ವಲಯದ ನೋಡೆಲ್ ಅಧಿಕಾರಿಗಳು ಮಾತನಾಡಿ ಈಗಾಗಲೇ ಸಭೆ ಕರೆದು ಸೂಚನೆಯನ್ನು ಸಹ ನೀಡಲಾಗಿದೆ, ಕಚೇರಿಗಳಲ್ಲಿ ಮಾಹಿತಿಗಳು ಲಭ್ಯವಿಲ್ಲದಿದ್ದಲ್ಲಿ ಮುಖ್ಯ ಲೆಕ್ಕಪರಿಶೋಧಕರ ಕಚೇರಿಯಲ್ಲಿ ಮಾಹಿತಿ ಪಡೆದು ಕಡತ ಮಂಡಿಸಲು ಸೂಚಿಸಲಾಗಿದೆ ಎಂದರು, ಈ ಕುರಿತು 15 ದಿನಗಳ ಒಳಗಾಗಿ ಪೂರ್ಣ ಮಾಹಿತಿಗಳನ್ನು ಒದಗಿಸಲು ಸೂಚಿಸಿದರು.

4. ದಕ್ಷಿಣ ವಲಯದಲ್ಲಿ ಪ್ರತಿ ದಿನ ವಸೂಲಾತಿ ಮಾಡಲು ಕ್ರಮಕೈಗೊಳ್ಳಲಾಗುತ್ತಿರುವುದಾಗಿ ತಿಳಿಸಿ 2006–2007 ನೇ ಸಾಲಿನ ಸುಮಾರು 12.7ಕೋಟಿ ಅಕ್ಷೇಪಣೆ ಮತ್ತು ರೂ:51 ಲಕ್ಷ ವಸೂಲಾತಿಯಲ್ಲಿ ಸುಮಾರು 4.85ಕೋಟಿ ರೂಗಳ ಅಕ್ಷೇಪಣೆಗೆ ಉತ್ತರಗಳನ್ನು ಮತ್ತು 1ಲಕ್ಷರೂಗಳಷ್ಟನ್ನು ವಸೂಲಾತಿ ಮಾಡಿರುವುದಾಗಿ ನೋಡೆಲ್ ಅದಿಕಾರಿಗಳು ತಿಳಿಸಿದ ಮೇರೆಗೆ ಇನ್ನು 15 ದಿನಗಳ ಒಳಗಾಗಿ ಎಲ್ಲಾ ಮಾಹಿತಿಗಳನ್ನು ಒದಗಿಸಲು ಅಧ್ಯಕ್ಷರು ಸೂಚಿಸಿದರು.

5. ಕೇಂದ್ರ ಕಚೇರಿಯ ನೋಡೆಲ್ ಅಧಿಕಾರಿಗಳು ಮಾತನಾಡಿ 2006–2007ನೇ ಸಾಲಿನಲ್ಲಿ ಈಗಾಗಲೇ ರೂ: 2 ಕೊಟಿ ಮೊತ್ತಕ್ಕೆ ಉತ್ತರಗಳನ್ನು ಸಿದ್ದಪಡಿಸಿ ರೂ:37 ಲಕ್ಷಗಳಷ್ಟನ್ನು ವಸೂಲಿ ಮಾಡಿರುವುದಾಗಿ ತಿಳಿಸಿದಾಗ ಒಂದು ವರ್ಷದ ಮಾಹಿತಿ ಒದಗಿಸಿದರೆ ಸಾಲದು 1995–96 ರಿಂದ ಇಲ್ಲಿಯವರೆಗೆ ಎಷ್ಟು ವಸೂಲಾತಿ ಮಾಡಬೇಕು ಇದಕ್ಕೆ ಯಾರು ಹೊಣೆ ಎಂಬುದರ ವಿವರಗಳನ್ನು ಒದಗಿಸಲು ಅಧ್ಯಕ್ಷರು ಸೂಚಿಸಿದರು.

ಹೊಸ ವಲಯಗಳಲ್ಲಿ 2 ವರ್ಷದ ಆಡಿಟ್ ಆಕ್ಷೇಪಣೆ ವಸೂಲಾತಿ ಇರುವುದರಿಂದ ಆದಷ್ಟು ತ್ವರಿತವಾಗಿ ಕ್ರಮಕೈಗೊಳ್ಳಲು ಮತ್ತು ಪಾಲಿಕೆಗೆ ಸಿ.ಎಂ.ಸಿ.ಪ್ರದೇಶ ಸೇರ್ಪಡೆಯಾಗುವುದಕ್ಕೆ ಮುಂಚೆ ಇದ್ದ ಆಕ್ಷೇಪಣೆಗಳಿಗೆ ಮಾಹಿತಿಗಳನ್ನು ಸಂಪೂರ್ಣವಾಗಿ ಒದಗಿಸಲಾಗಿಸಿ ಆಕ್ಷೆಪಣೆಯಿಂದ ಕೈಬಿಡಲಾಗಿದೆಯೇ ಎಂಬುದರ ಬಗ್ಗೆ ಕಡತಗಳನ್ನು ಸಂರಕ್ಷಿಸಲು ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರಿಗೆ ಸೂಚಿಸಿದರು.

6. ಅಧ್ಯಕ್ಷರು ಮಾತನಾಡಿ ಈಗಾಗಲೇ 2008–2009ನೇ ಸಾಲಿನ ಆಡಿಟ್ ವರದಿ ಮುಖ್ಯ ಲೆಕ್ಕಪರಿಶೋಧಕರಿಂದ ಬಿಡುಗಡೆಯಾಗಿದ್ದು, ಅದರ ಬಗ್ಗೆ ಕ್ರಮಕೈಗೊಳ್ಳಲು ಈಗಾಗಲೇ ಸಮಿತಿಯ ವತಿಯಿಂದ ಪತ್ರವನ್ನು ಸಹ ಬರೆಯಲಾಗಿದೆ. ಸದರಿ ವರದಿಗೆ ಮೂರು ತಿಂಗಳ ಒಳಗೆ ಮಾಹಿತಿ ಕ್ರೋಡೀಕರಿಸಿ ಮಂಡಿಸುವ ಬಗ್ಗೆ ಕ್ರಮಕೈಗೊಳ್ಳಲು ಎಲ್ಲಾ ನೋಡೆಲ್ ಅಧಿಕಾರಿಗಳಿಗೆ ಸೂಚಿಸುತ್ತಾ, ಮುಖ್ಯಲೆಕ್ಕಾಧಿಕಾರಿಗಳ ಕಚೇರಿಯಲ್ಲಿ ಫ್ರೀಆಡಿಟ್ ವ್ಯವಸ್ಥೆ ಇಲ್ಲದಿರುವುದು, ಟ್ರಯಲ್ ಬ್ಯಾಲೆನ್ಸ್ ಇಲ್ಲದಿರುವುದು ಕಂಡುಬಂದಿದೆ, ವಲಯ ಸಹಾಯಕ ನಿಯಂತ್ರಕರು ಹಣಕಾಸು ರವರಿಗೆ ಹುದ್ದೆಗೆ ತಕ್ಕ ಜವಾಬ್ದಾರಿ ಮತ್ತು ಕೆಲಸಕಾರ್ಯಗಳು ಇಲ್ಲದಿರುವುದರಿಂದ ಈ ಕುರಿತು ಕ್ರಮಕೈಗೊಳ್ಳಲು ಮುಖ್ಯ ಲೆಕ್ಕಾಧಿಕಾರಿಗಳಿಗೆ ಸೂಚಿಸಿದರು.

7. ಮುಖ್ಯ ಲೆಕ್ಕಾಧಿಕಾರಿಗಳು ಮಾತನಾಡಿ ವಲಯ ಸಹಾಯಕ ನಿಯಂತ್ರಕರಿಗೆ ಹೆಚ್ಚಿನ ಜವಾಬ್ದಾರಿ ನೀಡಲು ಕ್ರಮಕೈಗೊಳ್ಳಲಾಗುತ್ತಿದ್ದು, ಜಾಬ್ ಕೋಡ್ ಕೊಡುವ ಪದ್ಧತಿಯನ್ನು ಸಹ ವಲಯಕ್ಕೆ ವಿಸ್ತರಿಸಲು ಚಿಂತನೆ ನಡೆಸಲಾಗುತ್ತಿದೆ ಎಂದು ಅಧ್ಯಕ್ಷರ ಮಾಹಿತಿಗೆ ತಂದರು.

8. ಡಾ:ಶಿವಪ್ರಸಾದ ಎಂ.ಎಸ್. ರವರು ಮಾತನಾಡಿ ಸಾಕಷ್ಟು ಕಡೆಗಳಲ್ಲಿ ಪಾಲಿಕೆಯ ವಸ್ತುಗಳು ಹಾಳಾಗಿ ಬಿದ್ದಿದ್ದು, ಹಲಸೂರು ಆಸ್ಪತ್ರೆ ಆವರಣದಲ್ಲಿ ಪಾಲಿಕೆಯ ಸುಮಾರು ಹಳೆಯ ವಾಹನಗಳು ತುಕ್ಕು ಹಿಡಿಯುತ್ತಿದ್ದು ಇವುಗಳನ್ನು ಲೆಕ್ಕಹಾಕಿ ಹರಾಜು ಹಾಕಿದರೆ ಪಾಲಿಕೆಗೆ ಆದಾಯ ಸಹ ಬರುವುದರಿಂದ ಈ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು.

ಅಧ್ಯಕ್ಷರು ಮಾತನಾಡಿ ಪಾಲಿಕೆಯಲ್ಲಿ ಸುಮಾರು 668 ಖಾತೆಗಳನ್ನು ತೆರದು ವ್ಯವಹಾರ ನಡೆಸುತ್ತಿರುವುದರಿಂದ ಇವುಗಳ ಬ್ಯಾಲೆನ್ಸ್ ತೆಗೆದುಕೊಳ್ಳದೇ ಹೇಗೆ ಟ್ರಯಲ್‌ಬ್ಯಾಲೆನ್ಸ್ ಮಾಡುತ್ತಾರೆ ಎಂಬುದೇ ಅನುಮಾನ ಇನ್ನು ಮುಂದೆಯಾದರು ಸಹ ಪಾಲಿಕೆಯ ಚರ ಮತ್ತು ಸ್ಥಿರ ಆಸ್ತಿಗಳನ್ನು ಲೆಕ್ಕಾಚಾರ ಮಾಡಲು ಮುಖ್ಯ ಲೆಕ್ಕಾಧಿಕಾರಿಗಳಿಗೆ ಸೂಚಿಸುವುದರೊಂದಿಗೆ ಸಭೆಯು ಮುಕ್ತಾಯವಾಯಿತು.

ಅಧ್ಯಕ್ಷರು,
ಲೆಕ್ಕಪತ್ರ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು: :ಪೂಜ್ಯ ಮಹಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಲೆಕ್ಕಪತ್ರ ಸ್ಥಾಯಿ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿದೆ.
:ಆಯುಕ್ತರು ರವರ ಅವಗಾಹನೆಗೆ ಹಾಗು ಮುಂದಿನ ಕ್ರಮಕ್ಕೆ ಕಳುಹಿಸಿದೆ.
ಅಪರ ಆಯುಕ್ತರು(ಹಣಕಾಸು)ರವರಿಗೆ ಮುಂದಿನ ಕ್ರಮಕ್ಕೆ ಕಳುಹಿಸಿದೆ.
ಮುಖ್ಯ ಲೆಕ್ಕಾಧಿಕಾರಿಗಳಿಗೆ ಮುಂದಿನ ಕ್ರಮಕ್ಕೆ ಕಳುಹಿಸಿದೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಲೆಕ್ಕಪತ್ರ ಸ್ಥಾಯಿ ಸಮಿತಿ ವತಿಯಿಂದ ದಿನಾಂಕ:20–9–2011ರಂದು ನಡೆದ ಸಭೆಯ ನಡವಳಿಗಳು

ಹಾಜರಿದ್ದ ಸಮಿತಿ ಸದಸ್ಯರು

- ಶ್ರೀ.ಎ.ಎಲ್.ಶಿವಕುಮಾರ್ ಅಧ್ಯಕ್ಷರು
- ಶ್ರೀಮತಿ ನೂರ್ ಜಹಾನ್ ಷರೀಫ್ ಸದಸ್ಯರು
- ಶ್ರೀಮತಿ ಕ್ವೀನ್ ಎಲಿಜಬೆತ್ ಸದಸ್ಯರು
- ಶ್ರೀ.ಜಿ.ಆನಂದ್ ಸದಸ್ಯರು
- ಶ್ರೀ.ಕೆ.ಚಂದ್ರಶೇಖರ್ ಸದಸ್ಯರು
- ಶ್ರೀಮತಿ ಸೈಯದ್ ಹಸೀನಾ ತಾಜ್ ಸದಸ್ಯರು
- ಶ್ರೀ.ಸಂಪತ್ ರಾಜ್ ಸದಸ್ಯರು
- ಶ್ರೀಮತಿ ಎಂ.ಜೆ.ಜಯರತ್ನ ಸದಸ್ಯರು

ಹಾಜರಿದ್ದ ಅಧಿಕಾರಿಗಳು:–

ಮುಖ್ಯ ಅಭಿಯಂತರರು((ವಿ ಅಂಡ್ ಪಿ.ಪಿ.ಇ.ಡಿ)
ಮುಖ್ಯ ಅಭಿಯಂತರರು(ಎಸ್.ಡಬ್ಲು.ಡಿ)/(ಹಿಂದಿನ ಪ್ರಮುಖ ರಸ್ತೆಗಳು)
ಅಧೀಕ್ಷಕ ಅಭಿಯಂತರರು(ರಸ್ತೆ ಮೂ.ಸೌ)
ಕಾರ್ಯಪಾಲಕ ಅಭಿಯಂತರರು(ಆಯುಕ್ತರ ತಾಂತ್ರಿಕ ಸಲಹೆಗಾರರು)
ಕಾರ್ಯಪಾಲಕ ಅಭಿಯಂತರರು(ಹಿಂದಿನ–ಕೆ.ಎಂ.ಆರ್.ಪಿ.)
ಹಾಗು ಹಿಂದೆ ಕೆ.ಎಂ.ಆರ್.ಪಿ.ಯೋಜನೆಯಲ್ಲಿ ಕರ್ತವ್ಯ ನಿರ್ವಹಿಸಿರುವ ಅಭಿಯಂತರರು

ಗೈರು ಹಾಜರಿ ಅಧಿಕಾರಿಗಳು:–

ಅಯುಕ್ತರು
ವಿಶೇಷ ಆಯುಕ್ತರು(ಯೋಜನೆ)
ಯೋಜನಾ ನಿರ್ದೇಶಕರು(ಹಿಂದಿನ ಕೆ.ಎಂ.ಆರ್.ಪಿ)

**ವಿಷಯ: ಕರ್ನಾಟಕ ಮುನಿಸಿಪಲ್ ಸುಧಾರಣಾ ಯೋಜನೆಯಡಿಯಲ್ಲಿ ವಿಶ್ವ ಬ್ಯಾಂಕ್ ನೆರವಿನೊಂದಿಗೆ ಬೆಂಗಳೂರು ನಗರದಲ್ಲಿ ಆಯ್ದ ಅಧಿಕ ಮದ್ಯಮ ವಾಹನ ಸಾಂದ್ರತೆಯ ಕಾರಿಡಾರ್ ರಸ್ತೆಗಳನ್ನು ಅಭಿವೃದ್ದಿಪಡಿಸುವ ಪ್ಯಾಕೇಜ್ ಕೆ.ಎಂ.ಆರ್.ಪಿ.–01, 02, 03 ಮತ್ತು 04ರ 2006–2007ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಅನುಸರಣಾ ವರದಿಗೆ ಅನುಮೋದನೆ ತೀಮಾನ ತೆಗೆದುಕೊಳ್ಳುವ ಬಗ್ಗೆ.**

ಅಧ್ಯಕ್ಷರು ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿ ಮಾತನಾಡಿ ಕೆ.ಎಂ.ಆರ್.ಪಿ.ಯೋಜನೆಯಲ್ಲಿ ಸುಮಾರು 32 ಕೋಟಿ ರೂಗಳಷ್ಟು ಅಡಿಟ್ ಆಕ್ಷೇಪಣೆ ಬಗ್ಗೆ ತೀರ್ಮಾನ ಕೈಗೊಳ್ಳಲು ಸಮಿತಿಗೆ ಕಡತ ಮಂಡಿಸಲಾಗಿದೆ ಕಳೆದ ದಿನಾಂಕ:20–8–2011ರ ಸಮತಿಯ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿ ಮುಂದೂಡಲಗಿತ್ತು. ಈ ಮದ್ಯ ದಿನಾಂಕ:4/9/2011ರಂದು ಮುಖ್ಯ ಅಭಿಯಂತರರು(ಎಸ್.ಡಬ್ಲೂ.ಡಿ.)ರವರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಗುತ್ತಿಗೆದಾರರು ಆರ್ಬಿಟೇಶನ್ ಮುಂದೆ ಹೋಗಿರುವುದರಿಂದ ಹಾಗು ಪಾಲಿಕೆಯಿಂದ ಲಿಕ್ವಿಡಿಟಿ ಡ್ಯಾಮೇಜ್, ಕಂಪ್ಲೀಷನ್ ಸರ್ಟಿಫಿಕೇಟ್ ಎಲ್ಲವನ್ನು ಸಹ ನೀಡಲಾಗಿದೆ ಹೀಗಿರುವಾಗ ಆರ್ಬಿಟೇಷನ್ ನಲ್ಲಿ ಪಾಲಿಕೆಯಿಂದ ಸೂಕ್ತ ವಾದ ಮಂಡಿಸುವುದು ಸೂಕ್ತವಾಗಿರುವುದರಿಂದ ಕಾನೂನು ತಜ್ಞರನ್ನು ನೇಮಿಸಲು ಸೂಚಿಸಲಾಗಿದ್ದು ಇದುವರೆವಿಗೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ.

ಸಭೆಯಲ್ಲಿ ಚರ್ಚಿಸಿದಂತೆ ತಜ್ಞರನ್ನೊಳಗೊಂಡ ಒಂದು ಸಮಿತಿಯನ್ನು ರಚನೆ ಮಾಡಿ ಆ ಸಮಿತಿಯಿಂದ ಸಾಧಕ ಬಾಧಕಗಳ ಬಗ್ಗೆ ವರದಿಯನ್ನು ಪಡೆದು ಆ ನಂತರ ಒಂದು ನಿರ್ಧಾರಕ್ಕೆ ಬರಲು ಸಾಧ್ಯವಾಗುತ್ತದೆ ಇಲ್ಲದಿದ್ದರೆ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗುವ ಸಂಭವ ಇರುವುದರಿಂದ ವಿಶ್ವ ಬ್ಯಾಂಕ್ ಸಲಹೆಗಾರರು ರವರನ್ನೊಳಗೊಂಡ 7 ಜನರ ಸಮಿತಿಯನ್ನು ರಚಿಸಲು ತಿಳಿಸಲಾಗಿತ್ತು ಈ ಬಗ್ಗೆ ಇದುವರೆವಿಗೂ ಯಾವುದೇ ಕ್ರಮಕೈಗೊಂಡಿರುವುದಿಲ್ಲ ಎಂದು ಆದ್ಯಕ್ಷರು ತಿಳಿಸಿದರು.

ಕೆ.ಎಂ.ಅರ್.ಪಿ. ಕಾರ್ಯಪಾಲಕ ಅಬಿಯಂತರರು ಮಾತನಾಡಿ ಗುತ್ತಿಗೆದಾರರು ಅರ್ಬಿಟೇಶನ್‌ಗೆ ಹೋಗಿರುವುದರಿಂದ ಈ ಸಮಯದಲ್ಲಿ ಯಾವುದೇ ಕ್ರಮಕೈಗೊಳ್ಳಲು ಬರುವುದಿಲ್ಲ ಎಂದು ಅಭಿಪ್ರಾಯಪಡುತ್ತಾ ಆಕ್ಷೇಪಣೆಯಲ್ಲಿ ಸೂಚಿಸಿರುವಂತೆ ಕರಾರು ಪತ್ರದ ಕ್ಲಾಸ್ 20ರ ಪ್ರಕಾರ ಡಿಸೈನ್, ಮೆಷಿನರಿ ಸ್ಥಾಪನೆ, ಇತ್ಯಾಧಿ ಬಗ್ಗೆ ಕಾಲಾವಕಾಸ ನೀಡಬಹುದಾಗಿದೆ, ಕ್ಲಾಸ್ 44.1ರ ಪ್ರಕಾರ ಇ.ಓ.ಡಿ ನೀಡಲಾಗಿದೆ ಆದ್ದರಿಂದ ಆಕ್ಷೇಪಣೆಯನ್ನು ಕೈಬಿಡಬಹುದಾಗಿದೆ, ವಿಶ್ವ ಬ್ಯಾಂಕ್ ನಿಯಮದಂತೆ ನಿರ್ವಹಿಸಲಾಗಿದೆ ಬಿಲ್ಲನ್ನು ಪಾವತಿಸುವ ಮುನ್ನ ಕೆ.ಯು.ಐ.ಡಿ.ಎಫ್.ಸಿ. ವತಿಯಿಂದ ಅಡಿಟ್ ಸಹ ಮಾಡಿಸಲಾಗಿದ್ದು, ವಿಶ್ವ ಬ್ಯಾಂಕ್ ರವರು ಪತ್ರ ಬರೆದು ದಿನಾಂಕ:30–9–2011ರ ಒಳಗೆ ಆಡಿಟ್ ಆಕ್ಷೇಪಣೆಯನ್ನು ಪೂರ್ಣಗೊಳಿಸಿದರೆ ಬಾಕಿ ಇರುವ 8 ಕೋಟಿ ರೂಗಳನ್ನು ನೀಡುವುದಾಗಿ ಇಲ್ಲದಿದ್ದರೆ ಈಗಾಗಲೇ ನೀಡಿರುವ ಹಣವನ್ನು ವಾಪಸ್ಸು ನೀಡಲು ತಿಳಿಸಿರುತ್ತಾರೆ. ಎಂದು ತಿಳಿಸಿದರು.

ಮುಖ್ಯ ಅಬಿಯಂತರರು (ಎಸ್.ಡಬ್ಲ್ಯೂ.ಡಿ.)ರವರು ಮಾತನಾಡಿ ಕಾಮಗಾರಿ ನಡೆಯುವ ಸಮಯದಲ್ಲಿ ಎಲ್ಲಾ opportunity ನೀಡಿ ಕಾಮಗಾರಿ ಮಾಡಲಾಗಿದೆ ಉನ್ನತ ಅಧಿಕಾರಿಗಳು ಒಂದು ತೀರ್ಮಾನಕ್ಕೆ ಬಂದು ಅನುಮತಿ ನೀಡಲಾಗಿರುತ್ತದೆ. ಆದರೆ ಆಡಿಟ್ ಬಂದಾಗ ಈ ಸಮಸ್ಯೆ ಅಗುತ್ತದೆ ಕರಾರು ಪತ್ರದಂತೆ ವಿಸ್ತರಣೆ ನೀಡಿರುವುದು ತಪ್ಪು ಎಂದು ಹೇಳುವುದು ಸರಿಯಲ್ಲ ಎಂದಾಗ, ಸಹಾಯಕನಿಯಂತ್ರಕರು(ಆಡಿಟ್)ರವರು ಮಾತನಾಡಿ ಎಲ್ಲಿ ತಪ್ಪು ನಿರ್ವಹಣೆ ಮಾಡಲಾಗಿದೆ ಅದನ್ನು ಪ್ರಶ್ನೆ ಮಾಡಲು ಆಡಿಟ್ ವಿಭಾಗ ಇರುವುದು ಇಲ್ಲಿ ಯಾರು ಹಿರಿಯರಲ್ಲ ಇಲ್ಲಿ ಕಾನೂನು ದೊಡ್ಡದು ಎಂದು ತಿಳಿಸಿದರು.

ಅಧ್ಯಕ್ಷರು ಮಾತನಾಡಿ ಆಡಿಟ್ ಆಕ್ಷೇಪಣೆಗೆ ತೀರುವಳಿ ಪಡೆಯುವ ಮುನ್ನ ಸರಿಯಾದ ಕ್ರೋಡೀಕೃತ ದಾಖಲೆಗಳನ್ನು ಒದಗಿಸಿ ಆಕ್ಷೇಪಣೆ ಕೈಬಿಡಲು ಕೋರಬೇಕಾಗಿದೆ. ಆದರೆ ಇಲ್ಲಿ ಕೆಲವು ಸಿಲ್ಲಿ ರೀಸನ್ ಅಂದರೆ ನೀಡಿ ಕಾಮಗಾರಿಯನ್ನು 765 ದಿನದ ಕಾಲಾವಕಾಶ ನೀಡಿರುವುದು ಸರಿಯಾದ ಕ್ರಮವಲ್ಲವೆಂದರು.

ಹಿಂದಿನ ಮುಖ್ಯ ಆಬಿಯಂತರರು(ರಸ್ತೆ ವಿಸ್ತರಣೆ)ರವರು ಮಾತನಾಡಿ ಈ ಹಿಂದೆ ರಸ್ತೆ ಅಗಲೀಕರಣ ಸಮಯದಲ್ಲಿ ಇ.ಎ.ಟಿ. ಮತ್ತು ಎನ್.ಡಿ. ಸಂದರ್ಭದಲ್ಲಿ ಕಾಂಪ್ರಮೈಸ್ ಮಾಡಿಕೊಂಡು ನಿರ್ವಹಿಸಲಾಗಿರುವುದಾಗಿ ತಿಳಿಸಿದಾಗ ಸಹಾಯಕ ನಿಯಂತ್ರಕರು(ಆಡಿಟ್)ರವರು ಮಾತನಾಡಿ ಸದರಿ ಕಾಮಗಾರಿಯಲ್ಲಿ 2 ಕಡೆಯಿಂದಲೂ ತಪ್ಪುಗಳು ಆಗಿರುತ್ತವೆ ಅದರಿಂದ ಈ ವಿಷಯಕ್ಕೆ ಕಾಂಪ್ರಮೈಸ್ ಅನ್ವಯವಾಗುವುದಿಲ್ಲ, ಮೂಲ ಕಡತವನ್ನು ಪರಿಶೀಲಿಸಿದಾಗ ಎ.ಇ. ಯಿಂದ ಹಿಡಿದು ಸಿ.ಇ.ವರೆವಿಗೂ ಗುತ್ತಿಗೆದಾರರು ಸರಿ ಇಲ್ಲವೆಂದು ಗುತ್ತಿಗೆ ರದ್ದುಪಡಿಸಿ ಇಲಾಖಾ ವತಿಯಿಂದ ಕಾಮಗಾರಿ ಮಾಡಲು ಶಿಫಾರಸ್ಸು ಮಾಡಲಾಗಿದೆ, ತದನಂತರ ಕಡತವನ್ನು ಮರೆಮಾಚಿ ಕಾಲ ವಿಸ್ತರಣೆ, ಲಿಕ್ವಿಡಿಟಿ ಡ್ಯಾಮೇಜ್, ಇತ್ಯಾಧಿ ಎಲ್ಲವನ್ನು ನೀಡಿ ಈಗ ಬಿ.ಬಿ.ಎಂ.ಪಿ. ಎಂದು ಹೇಳುವುದು ಸರಿಯಲ್ಲ ಇದರ ಆದಾರದಲ್ಲಿಯೇ ಪಾಲಿಕೆಗೆ ಸುಮಾರು 32 ಕೋಟಿ ನಷ್ಟ ಉಂಟಾಗುತ್ತಿದೆ ಎಂದು ತಿಳಿಸಲಾಗಿದೆ, ಈ ನಷ್ಟವನ್ನು ಸಂಬಂದಪಟ್ಟ ಅಧಿಕಾರಿಗಳಿಂದ ಅಥವಾ ಗುತ್ತುಗೆದಾರರಿಂದ ವಸೂಲಿ ಮಾಡಬೇಕಾಗುತ್ತದೆ. ಈ ಆಕ್ಷೇಪಣೆ ಬಾಕಿ 5 ವರ್ಷ ಆಗಿದೆ ಇನ್ನು ಏನು ಕ್ರಮ ಕೈಗೊಂಡಿಲ್ಲ ಎಂದು ಅದ್ಯಕ್ಷರ ಮಾಹಿತಿಗೆ ತಂದರು.

ಮುಖ್ಯ ಲೆಕ್ಕಾಧಿಕಾರಿಗಳು ಮಾತನಾಡಿ ಸದರಿ ಯೋಜನೆಗೆ ವಿಶ್ವ ಬ್ಯಾಂಕ್ ಶೇಕಡ 40, ಬಿ.ಬಿ.ಎಂ.ಪಿ.ಶೇಕಡ 10 ಮತ್ತು ರಾಜ್ಯ ಸರ್ಕಾರ ಶೇಕಡ 50 ನ್ನು ತೊಡಗಿಸಿಕೊಂಡು ಕಾಮಗಾರಿ ಮಾಡಲಾಗಿದೆ. ಆದರೆ ವಿಶ್ವ ಬ್ಯಾಂಕ್‌ನಿಂದ ಬಾಕಿ ಇರುವ ಅನುದಾನ ಪಡೆಯಬೇಕಾದರೆ ಆಡಿಟ್ ಆಕ್ಷೇಪಣೆ ಸರಿಪಡಿಸಿಕೊಂಡಲ್ಲಿ ಮಾತ್ರ ವಿಶ್ವ ಬ್ಯಾಂಕ್ ಅನುದಾನ ಲಭ್ಯವಾಗಲಿದೆ ಇಲ್ಲದಿದ್ದಲ್ಲಿ ಪಾಲಿಕೆಗೆ ಇನ್ನೂ ಆರ್ಥಿಕ ಹೊರ ಉಂಟಾಗಲಿದೆ ಎಂದು ತಿಳಿಸಿದರು.

ಸಹಾಯಕ ನಿಂತ್ರಕರು(ಆಡಿಟ್) ರವರು ಮಾತನಾಡಿ ಒಂದು ತಜ್ಞರ ಸಮಿತಿಯನ್ನು ಮಾಡಿ ನಿರ್ಣಯ ತೆಗೆದುಕೊಂಡು ಅದನ್ನು ಸರ್ಕಾರಕ್ಕೆ ಕಳುಹಿಸಿ ಅದೇಶ ಪಡೆದು ತದನಂತರ ಆಡಿಟ್ ಆಕ್ಷೇಪಣೆಗೆ ಮಾಹಿತಿ ನೀಡಿ ಕೈಬಿಡಲು ಕೋರಿದಲ್ಲಿ ಮಾತ್ರ ಕೈಬಿಡಬಹುದಾಗಿದೆ ಎಂದು ತಿಳಿಸಿದಾಗ ಸಹಾಯಕ ಅಭಿಯಂತರರು ಮಾತನಾಡಿ ಈ ಹಿಂದೆ ಆಕ್ಷೇಪಣೆಗಳನ್ನು ಕೈಬಿಡಲು ಸರ್ಕಾರಕ್ಕೆ ಕಳುಹಿಸಿಕೊಡಲಾಗಿತ್ತು ಆ ಸಂದರ್ಭದಲ್ಲಿ ಕೌನ್ಸಿಲ್ ಹೊಸದಾಗಿ ಅಸ್ತಿತ್ವಕ್ಕೆ ಬಂದ ಕಾರಣ ಕೌನ್ಸಿಲ್ ಅನುಮತಿಯೊಂದಿಗೆ ಮಂಡಿಸಲು ಸೂಚಿಸಲಾಗಿರುತ್ತದೆ ಎಂದು ತಿಳಿಸಿದರು.

ಅಧ್ಯಕ್ಷರು ಮಾತನಾಡಿ ಆಕ್ಷೇಪಣೆ ಹಾಕಿರುವುದು ಸರಿಯಾಗಿದೆಯೇ ಎಂಬುದನ್ನು ಪರಿಶೀಲಿಸಿ ಅಕ್ಷೇಪಣೆ ತೀರುವಳಿ ಮಾಡಲು ಕ್ರಮಕೈಗೊಳ್ಳಬೇಕಾಗುತ್ತದೆ, ಪ್ರೋಟೋಕಾಲ್ ರೀತಿ ಅಪೀಲ್ ಮಾಡಿ ಎಂ.ಓ.ಯು. ಮಾಡಿಕೊಂಡು 4–5 ಕಂತಿನಲ್ಲಿ ಬಿಲ್ ಪಾವತಿ ಮಾಡಬಹುದಾಗಿದೆ. 4 ದಿನಗಳ ಒಳಗಾಗಿ ಆಕ್ಷೆಪಣೆಗಳಿಗೆ ಸೂಕ್ತ ದಾಖಲೆಗಳ ಸಮೇತ ಮಾಹಿತಿ ನೀಡಲು ಹಾಗು ಕಾನೂನು ವಿಭಾಗದಿಂದ ಅಬಿಪ್ರಾಯ ಪಡೆದು ಗುತ್ತಿಗೆದಾರರೊಂದಿಗೆ ನೆಗೋಶಿಯೇಶನ್ ಮಾಡಲು ಕ್ರಮಕೈಗೊಳ್ಳಬೇಕೆಂದು ಕಾರ್ಯಪಾಲಕ ಅಭಿಯಂತರರು(ಹಿಂದಿನ)ರವರಿಗೆ ಸೂಚಿಸಿದರು.

ಮುಖ್ಯಲೆಕ್ಕಾದಿಕಾರಿಗಳು ಮಾತನಾಡಿ ಅಧ್ಯಕ್ಷರು ಸೂಚಿಸಿದಂತೆ ಮಾಹಿತಿಗಳನ್ನು ನೀಡಲು 4 ದಿನಗಳ ಮಾಹಿತಿಯನ್ನು ನೀಡುವ ಬಗ್ಗೆ ಹಾಗು ನೆಗೋಶಿಯೇಶನ್ ಮಾಡಲು ಕಾಲಾವಕಾಶ ನೀಡುವಂತೆ ಕೋರಿ ಆದ್ಯಕ್ಷರಿಗೆ ಪತ್ರ ನೀಡಲು ಕಾರ್ಯಪಾಲಕ ಅಭಿಯಂತರರಿಗೆ ತಿಳಿಸಿದರು.

ಅಧ್ಯಕ್ಷರು,
ಲೆಕ್ಕಪತ್ರ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು: :ಪೂಜ್ಯ ಮಹಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಲೆಕ್ಕಪತ್ರ ಸ್ಥಾಯಿ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿದೆ.
:ಆಯುಕ್ತರು ರವರ ಅವಗಾಹನೆಗೆ ಹಾಗು ಮುಂದಿನ ಕ್ರಮಕ್ಕೆ ಕಳುಹಿಸಿದೆ.
ಅಪರ ಆಯುಕ್ತರು(ಹಣಕಾಸು)ರವರಿಗೆ ಮುಂದಿನ ಕ್ರಮಕ್ಕೆ ಕಳುಹಿಸಿದೆ.
ಮುಖ್ಯ ಲೆಕ್ಕಾಧಿಕಾರಿಗಳಿಗೆ ಮುಂದಿನ ಕ್ರಮಕ್ಕೆ ಕಳುಹಿಸಿದೆ.